ಇದೆ ಎಂದಾಯಿತು. ಮಾನ್ಯ ಮುಖ್ಯಮಂತ್ರಿಗಳ ಸಹಮತಿಯನ್ನಷ್ಟೇ ತಾವು ಪಡೆದುಕೊಳ್ಳಬೇಕು. ನಿಮ್ಮ ಮೂರು ಜನರ ಸಹಮತಿ ಇದೆ. ಅಂದರೆ ನೀವು ಮೂರು ಮಂದಿ ಮಾನ್ಯ ಮುಖ್ಯಮಂತ್ರಿಗಳ ಮುಂದೆ Joint Select Committee ಗೆ ಕಳುಹಿಸಲಿಕ್ಕೆ plead ಮಾಡುತ್ತೀರಿ ಎಂದು ನಾವು ತಿಳಿದುಕೊಳ್ಳುತ್ತೇವೆ. If that is the case, we can postpone the discussion.

ಶ್ರೀ ಜೆ.ಸಿ.ಮಾಧುಸ್ವಾಮಿ : ಸನ್ಮಾನ್ಯ ಸಿಂಧ್ಯಾರವರು technical ಆಗಿ ಇನ್ನೂ JD{S} Member ಆಗಿದ್ದಾರೆ. JD{S} Members ನಲ್ಲೂ ಸಹಮತವಿಲ್ಲ ಎಂದು ತೀರ್ಮಾನವಾದಂತಾಯಿತು. Technically, for House purpose Mr. Scindia is a JD{S} Member. ಅಲ್ಲೂ ತಕರಾರು ಇದೆ ಎಂದ ಮೇಲೆ, ಇದು Joint Select Committeeಗೆ ಹೋಗಲೇಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : Joint Select Committee ಗೆ ಇದನ್ನು refer ಮಾಡುವುದಕ್ಕೆ ಎಲ್ಲರೂ ಒಪ್ಪಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಪ್ರಕಾಶ್‌ರವರನ್ನು ಅಭಿನಂದನೆ ಮಾಡುತ್ತೇನೆ. ಸದನದ ಭಾವನೆಗಳನ್ನು ಅರ್ಥ ಮಾಡಿಕೊಂಡು, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಪ್ರಕಾಶ್‌ರವರು ಇದಕ್ಕೆ ಒಪ್ಪಿದ್ದಾರೆ. ಇದಕ್ಕಾಗಿ ಖಂಡಿತವಾಗಿಯೂ ನಾವು ಅವರನ್ನು appreciate ಮಾಡಲೇಬೇಕು. Agriculture Marketing Minister, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಪ್ರಕಾಶ್‌ರವರು ಸದನದ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕೆ ಸ್ಪಂದಿಸಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. Joint Select Committee ಗೆ ಇದನ್ನು ಒಪ್ಪಿಸುತ್ತಾರೆ ಎನ್ನುವಂತಹ ವಿಶ್ವಾಸ ನಮಗಿದೆ. ಇವತ್ತು ಚರ್ಚೆ ಬೇಡ, ನಾಳೆ ಇದರ ಬಗ್ಗೆ ಚರ್ಚೆ ಮಾಡೋಣ.

[ಗೊಂದಲ]

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದರ ಬಗ್ಗೆ ಇವತ್ತೇ ಚರ್ಚೆಯಾಗಲಿ.

[ಗೊಂದಲ]

ಅಧ್ಯಕ್ಷರು : ಆಯಿತು, ಇದನ್ನು ನಾಳೆ ತೆಗೆದುಕೊಳ್ಳೋಣ. 2–3 ಗಮನ ಸೆಳೆಯುವ ಸೂಚನೆಗಳಿವೆ. ಅದನ್ನು ಈಗ ತೆಗೆದುಕೊಳ್ಳೋಣ. ಮೊದಲನೆಯದಾಗಿ, ಮಾನ್ಯ ಹೆಚ್ಚ. ಹಾಲಪ್ಪನವರ ಗಮನ ಸೆಳೆಯುವ ಸೂಚನೆ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟಂತಹ ಮಂತ್ರಿಗಳೇ ಇಲ್ಲ.

ಅಧ್ಯಕ್ಷರು : ಅವರ ಬದಲಾಗಿ ಯಾರಾದರೂ ಬೇರೆ ಮಂತ್ರಿಗಳು ಉತ್ತರ

ಕೊಡುತ್ತಾರೆ. ತಾವು ಪ್ರಸ್ತಾಪ ಮಾಡಿ.

ಶ್ರೀ ಹೆಚ್. ಹಾಲಪ್ಪ : ನಮ್ಮಲ್ಲಿ 18 ಗ್ರಾಮಗಳಲ್ಲಿ ಕಳೆದ 22 ದಿವಸಗಳಿಂದ...

ಶ್ರೀ ಎಂ.ಪಿ. ಪ್ರಕಾಶ್ : ಇಂಧನ ಇಲಾಖೆಯಿಂದ ಬಂದಿರುವ ಉತ್ತರವನ್ನು ತಮಗೆ ಕಳುಹಿಸಿಕೊಡಲಾಗಿದೆ. ಮಾನ್ಯ ಇಂಧನ ಸಚಿವರ ಪರವಾಗಿ ಉತ್ತರವನ್ನು ನಾನು ಓದುತ್ತೇನೆ. ತಾವು ಪ್ರಸ್ತಾಪ ಮಾಡಿ.

ಅಧ್ಯಕ್ಷರು : ನೀವು ಗಮನ ಸೆಳೆಯಿರಿ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಮಂತ್ರಿಗಳು ಇದ್ದರೆ ಸರಿ ಹೋಗುತ್ತಿತ್ತು. ಆದರೂ ನಾನು ಪ್ರಸ್ತಾಪಿಸುತ್ತೇನೆ.

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹಾಲಪ್ಪ ಹೆಚ್. ರವರು ನಿಯಮ 73 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಲೋಕೋಪಯೋಗಿ ಮತ್ತು ಇಂಧನ ಸಚಿವರ ಹೇಳಿಕೆ :–

ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವತಿಯಿಂದ 1978 ನೇ ಇಸವಿಯಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರದ 110/33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ 33/11 ಕೆ.ವಿ. ಹೊಸನಗರ ವಿದ್ಯುತ್ ವಿತರಣಾ ಕೇಂದ್ರಕ್ಕೆ ವಿದ್ಯುತ್ ಪೂರೈಸಲು 36 ಕಿ.ಮೀ ಉದ್ದದ 33 ಕೆವಿ ಮಾರ್ಗವನ್ನು ಹಾಗೂ 33/11 ಕೆ.ವಿ. ವಿತರಣಾ ಕೇಂದ್ರದಿಂದ ಹೊಸನಗರ ತಾಲ್ಲೂಕಿನ ವ್ಯಾಪ್ತಿಯ ಸುಮಾರು 165 ಗ್ರಾಮಗಳಿಗೆ ವಿದ್ಯುತ್ ಪೂರೈಸಲು 5 ಸಂಖ್ಯೆಗಳ 11 ಕೆ.ವಿ. ಮಾರ್ಗಗಳನ್ನು ನಿರ್ಮಿಸಲಾಗಿತ್ತು.

ತದನಂತರ ಮೆ: ಮೈಸೂರು ಪೇಪರ್ ಮಿಲ್ಸ್‌ರವರು ಸದ್ರಿ 33 ಕೆ.ವಿ. ಹಾಗೂ 11 ಕೆ.ವಿ. ಮಾರ್ಗಗಳ ಎರಡೂ ಬದಿಗಳಲ್ಲಿ ಅಂದಿನ ಕ.ವಿ.ಮಂ.ನ ಗಮನಕ್ಕೆ ತರದೆ ಅಕೇಶಿಯ ಮರಗಳನ್ನು ಬೆಳೆಸಿರುತ್ತಾರೆ. ಈ ಮರಗಳಿಂದ ಮಳೆಗಾಲದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗಬಹುದಾದ ತೊಂದರೆಗಳ ಬಗ್ಗೆ ವಲಯ ಅರಣ್ಯಾಧಿಕಾರಿ/ಉಪ–ಅರಣ್ಯಾಧಿಕಾರಿಯವರಿಗೆ ಪತ್ರ ಮುಖೇನ ಹಾಗೂ ಮೌಖಿಕವಾಗಿ ಹಲವಾರು ಬಾರಿ ತಿಳಿಸಲಾಗಿದೆ.

ಸದ್ರಿ ಅಕೇಶಿಯ ಮರಗಳು ಸುಮಾರು 50 ರಿಂದ 60 ಅಡಿಗಳವರೆಗೆ ಬೆಳೆದು ನಿಂತಿರುತ್ತವೆ ಮತ್ತು ಇವುಗಳ ಬೇರುಗಳು ಆಳಕ್ಕೆ ಇಳಿಯದೇ ಇರುವುದರಿಂದ ಸ್ವಲ್ಪ ಗಾಳಿ ಅಥವಾ ಮಳೆ ಬಂದರೂ ಬುಡಮೇಲಾಗುತ್ತವೆ. ಈ ಎತ್ತರಕ್ಕೆ ಬೆಳೆದು ನಿಂತ

ಅಕೇಶಿಯ ಮರಗಳು ಕಮಾನು ರೀತಿಯಲ್ಲಿ ಆವರಿಸಿದ್ದು, ಕಳೆದ 15 ದಿನಗಳಿಂದ ಉಂಟಾದ ಭಾರಿ ಮಳೆ ಮತ್ತು ಗಾಳಿಯಿಂದ 33 ಕೆ.ವಿ. ಹಾಗೂ 11 ಕೆ.ವಿ. ಲೈನ್‌ಗಳ ಮೇಲೆ ಬಿದ್ದು 11 ಕೆ.ವಿ. ಮಾರ್ಗಗಳ 219 ಕಂಗಳು ಮುರಿದಿವೆ ಹಾಗೂ 33 ಕೆ.ವಿ. ಮಾರ್ಗದ ತಂತಿಯು ಅನೇಕ ಕಡೆಗಳಲ್ಲಿ ಅನೇಕ ಬಾರಿ ತುಂಡಾಗಿರುತ್ತದೆ. ಇದರಿಂದಾಗಿ 146 ಗ್ರಾಮಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ವಿದ್ಯುತ್ ಸರಬರಾಜನ್ನು ಸುಸ್ಥಿತಿಗೆ ತರುವಲ್ಲಿ ಮೆಸ್ಕಾಂ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದ್ದು, ಈಗಾಗಲೇ ಮುರಿದು ಬಿದ್ದಿದ್ದ 139 ವಿದ್ಯುತ್ ಕಂಬಗಳನ್ನು ಬದಲಾಯಿಸಿ, 128 ಗ್ರಾಮಗಳಿಗೆ ವಿದ್ಯುತ್ ಸರಬರಾಜನ್ನು ಪುನರ್ ಕಲ್ಪಿಸಲಾಗಿದೆ.

ನಗರ ಸಮೀಪದಲ್ಲಿ ಕೊಲ್ಲೂರು ಸೇತುವೆಯೊಂದು ಮುರಿದು ಹೋಗಿರುವ ಕಾರಣ ಸುಮಾರು 160 ಕಿ.ಮೀ. ಸುತ್ತು ಬಳಸಿ ಅವಶ್ಯವಿರುವ ಸಾಮಾಗ್ರಿಗಳನ್ನು ಸಾಗಿಸಬೇಕಾಗಿ ಬಂದಿರುತ್ತದೆ. ಈ ಕಾರಣದಿಂದ ಉಳಿದ 18 ಗ್ರಾಮಗಳಿಗೆ ವಿದ್ಯುತ್ ಪುನರ್ ಸಂಪರ್ಕ ಕಲ್ಪಿಸುವಲ್ಲಿ ನಿಧಾನವಾಗುತ್ತಿದೆ. ಆದಷ್ಟು ಶೀಘ್ರವಾಗಿ ವಿದ್ಯುತ್ ಸರಬರಾಜನ್ನು ಈ 18 ಗ್ರಾಮಗಳಲ್ಲಿ ಯಥಾಸ್ಥಿತಿಗೆ ತರಲಾಗುವುದು.

(ಹೆಚ್.ಡಿ.ರೇವಣ್ಣ)

ಲೋಕೋಪಯೋಗಿ ಮತ್ತು ಇಂಧನ ಸಚಿವರು

5. ಗಮನ ಸೆಳೆಯುವ ಸೂಚನೆಗಳು

ವಿಷಯ : ಹೊಸನಗರ ತಾಲ್ಲೂಕಿನಲ್ಲಿ ಇತ್ತೀಚಿನ ಭಾರಿ ಮಳೆಯಿಂದಾಗಿ ವಿದ್ಯುತ್ ಕಂಬಗಳು ಮುರಿದು ಬಿದ್ದು, ವಿದ್ಯುತ್ ಸಂಪರ್ಕವಿಲ್ಲದೆ ತೊಂದರೆಯಾದ ಬಗ್ಗೆ.

ಶ್ರೀ ಹೆಚ್. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಹೊಸನಗರ ತಾಲ್ಲೂಕಿನಲ್ಲಿ ಇತ್ತೀಚಿನ ಭಾರಿ ಮಳೆಯಿಂದಾಗಿ ವಿದ್ಯುತ್ ಕಂಬಗಳು ಮುರಿದು ಬಿದ್ದು, ವಿದ್ಯುತ್ ಸಂಪರ್ಕವಿಲ್ಲದೆ ಇಡೀ ತಾಲ್ಲೂಕಿಗೆ ತೊಂದರೆಯಾಗಿರುವ ಬಗ್ಗೆ ಲೋಕೋಪಯೋಗಿ ಮತ್ತು ಇಂಧನ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ ಲಿಖಿತ ಉತ್ತರವನ್ನು ನೀಡಬಯಸುತ್ತೇನೆ (ಪ್ರತಿಯನ್ನು ಲಗತ್ತಿಸಲಾಗಿದೆ).